ಕರ್ನಾಟಕ ಸರ್ಕಾರ
ಕಂದಾಯ ಇಲಾಖೆ

**ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ವಿಪತ್ತು ನಿರ್ವಹಣ ಪ್ರಾಧಿಕಾರ, ಚಿತ್ರದುರ್ಗ ಇವರ ಕಚೇರಿ, ಚಿತ್ರದುರ್ಗ ಜಿಲ್ಲೆ, ಕರ್ನಾಟಕ ರಾಜ್ಯ**

ಸಂಖ್ಯೆ:-ಸಿಎಲ್:ಸಿಆರ್:12/2018-19 ದಿನಾಂಕ:17-12-2018.

ದೂರವಾಣಿ:- 08194-222811, 222538 ಈಮೇಲ್:- deo.chitradurga@gmail.com

**ವಿಷಯ:-** ಗುತ್ತಿಗೆ ಆಧಾರದ ಮೇರೆಗೆ ವಿಪತ್ತು ವೃತ್ತಿಪರ ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಿರುವ ಕುರಿತು.

----

**ಹಿನ್ನಲೆ:-**

ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರವು (ಎನ್‌ಡಿಎಂಎ) ಕೇಂದ್ರ ಸರ್ಕಾರದಿಂದ ಸೃಜಿಸ್ಪಟ್ಟ ಯೋಜನೆಯಾಗಿದ್ದು, ಇದರ ಉದ್ದೇಶ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ (ಎಸ್‌ಡಿಎಂಎ) ಮತ್ತು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ (ಡಿಡಿಎಂಎ) ವನ್ನು ಶಕ್ತಿಯುತವಾಗಿ ಮಾಡುವುದಾಗಿರುತ್ತದೆ. ಈ ಯೋಜನೆಯ ಉದ್ದೇಶವೇನೆಂದರೆ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರವನ್ನು ಮತ್ತಷ್ಟು ಸುಧಾರಣೆ ಮತ್ತು ಶಕ್ತಿಯುತವಾಗಿ ಕಾರ್ಯನಿರ್ವಹಣೆ ಮಾಡುವ ಬಗ್ಗೆ ಅರ್ಹ ಮತ್ತು ಸ್ವಯಂಸ್ಪೂರ್ತಿಯಿಂದ ಕೂಡಿದ ವ್ಯಕ್ತಿಗಳನ್ನು ಜಿಲ್ಲಾಧಿಕಾರಿಗಳ ಮೂಲಕ ನೇಮಕಾತಿ ಮಾಡಿ ಅವರಿಂದ ವಿಪತ್ತುನ್ನು ತಡೆಗಟ್ಟುವುದು, ಬರುವಂತಹ ವಿಪತ್ತನ್ನು ಕಡಿಮೆಗೊಳಿಸುವುದು ಹಾಗೂ ಸಂಭವಿಸಬಹುದಾದ ವಿಪತ್ತನ್ನು ತಡೆಯುವ ಬಗ್ಗೆ ಪೂರ್ವ ತಯಾರಿ ಹಾಗೂ ವಿಪತ್ತನ್ನು ಎದುರಿಸುವ ಬಗ್ಗೆ ಸಜ್ಜಿತವಾಗುವಂತೆ ಮಾಡುವುದು. ಈ ಪ್ರಸ್ತಾಪಿತ ಯೋಜನೆಯಿಂದ ಜಲ್ಲೆಯಲ್ಲಿ ಸಂಭವಿಸಬಹುದಾದ ವಿಪತ್ತಿನಿಂದ ಆಗಬಹುದಾದ ನಷ್ಟ ಮತ್ತ ಪ್ರಾಣಹಾನಿಯನ್ನು ತಡೆಗಟ್ಟಬಹುದಾಗಿರುತ್ತದೆ.

**ಸ್ಥಾನದ ಅವಲೋಕನಾ:-**

ನೇಮಕಗೊಂಡ ಉದ್ಯೋಗಿಯು ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಹಾಗೂ ಪ್ರಾಧಿಕಾರದ ಸದಸ್ಯರಿಗೆ ವಿಪತ್ತನ್ನು ತಡೆಗಟ್ಟುವ, ಕಡಿಮೆ ಮಾಡುವ, ವಿಪತ್ತನ್ನು ತಡೆಯಲು ಬೇಕಾಗದ ತಯಾರಿ ಹಾಗೂ ಅದರ ಅರ್ಹತೆಗಳ ಹಾಗೂ ಮಾನವ ನಿರ್ಮಿ ಅಥವಾ ನೈಸರ್ಗಿಕ ವಿಕೋಪಗಳ ಬಗ್ಗೆ ವಿಷಯ ಸಂಗ್ರಹಿಸಿ ಅನುಷ್ಠಾನಕ್ಕೆ ಅಗತ್ಯವಿರುವ ಸಹಕಾರ ನೀಡುವುದು. ಉದ್ಯೋಗಿಯು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಹೊಂದಾಣಿಕೆಯಿಂದ ಇದ್ದು, ವಿಪತ್ತನ್ನು ಕ್ಷೀಣಿಸುವ ಬಗ್ಗೆ ರಾಷ್ಟ್ರೀಯ ಮತ್ತು ರಾಜ್ಯ ವಿಪತ್ತು ನಿರ್ವಹಣಾಧಿಕಾರಿಗಳು ರೂಪಿಸಿದ ಕಾರ್ಯತಂತ್ರಗಳ ಬಲ ಹೆಚ್ಚಿಸುವುದು.

**ಉದ್ಯೋಗಿಯ ಕಾರ್ಯ ಮತ್ತು ಜವಾಬ್ದಾರಿಗಳು:-**

1) ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಬಲವರ್ಧನೆ ಹಾಗೂ ಪ್ರತಿ ಮೂರು ತಿಂಗಳಿಗೊಮ್ಮೆ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆ ನಡೆಯುವಂತೆ ನೋಡಿಕೊಳ್ಳುವುದು.
2) ಸಂಭವಿಸಬಹುದಾದ ವಿಪತ್ತನ್ನು ಅಂದಾಜಿಸಿ ಕಾರ್ಯೋನ್ಮುಖರಾಗುವುದು.
3) ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರಕ್ಕೆ ವಿಪತ್ತು ನಿರ್ವಹಣಾ ತಯಾರಿಕೆ ಬಗ್ಗೆ ಸಹಕಾರ ನೀಡುವುದರೊಂದಿಗೆ ಕಾಲ ಕಾಲಕ್ಕೆ ಅದನ್ನು ಕಾಲೋಚಿತಗೊಳಿಸುವುದು.
4) ದೊಡ್ಡದಾದ ಅಪಘಾತ ಹಾಗೂ ಅಪಾಯಕರ ಕೈಗಾರಿಕಾ ಅಪಘಾತಗಳ ತುರ್ತು ವಿಪತ್ತು ನಿರ್ವಹಣೆ ಬಗ್ಗೆ ಜಿಲ್ಲಾ ವಿಪತ್ತು ನಿರ್ವಹಣಾ ಯೋಜನೆಯಲ್ಲಿ ಕಾಲೋಚಿತಗೊಳಿಸುವುದು.
5) ಘಟನೆ ಹಾಗೂ ಸಂಗತಿಗಳ ಬಗ್ಗೆ ದಾಖಲಾತಿಗಳನ್ನು ತಯಾರಿಸುವುದು.
6) ಭಾರತೀಯ ವಿಪತ್ತು ನಿರ್ವಹಣಾ ಜಾಲ (ಐಡಿಆರ್‌ಎನ್) ಅನ್ನು ಅಗ್ಗಿಂದಾಗ್ಗೆ ಕಾಲೋಚಿತಗೊಳಿಸುವುದು.

7) ರಾಷ್ಟ್ರೀಯ ಹಾಗೂ ರಾಜ್ಯ ವಿಪತ್ತು ನಿರ್ವಹಣಾ ಮಂಡಳಿಗಳ ಸೂತ್ರದಂತೆ ವಿಪತ್ತು ಕಡಿಮೆಗೊಳಿಸುವ ಬಗ್ಗೆ ಕ್ರಮವಹಿಸುವುದು.
8) ವಿಪತ್ತು ಸಂಭವಿಸಬಹುದಾದಂತಹ ಸ್ಥಳಗಳಲ್ಲಿ ಅಣಕು ಪ್ರದರ್ಶನಗಳನ್ನು ನಿರ್ವಹಿಸುವ ಕಾರ್ಯತಂತ್ರಗಳನ್ನು ನಡೆಸುವುದು.
9) ವಿಪತ್ತು ನಿರ್ವಹಣಾ ಕಾಯ್ದೆ-2005ರ ಕಲಂ 30ರಂತೆ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದಲ್ಲಿ ವಿಪತ್ತು ನಿರ್ವಹಣಾ ಯಾಂತ್ರಿಕ ಕೌಶಲ್ಯ ಕಾರ್ಯಗಾರದ ಬಗ್ಗೆ ಅರಿವು ಮೂಡಿಸುವುದು.
10) ಸ್ಥಳೀಯ ಸಂಸ್ಥೆಗಳು, ಸರ್ಕಾರಿ ಮತ್ತು ಸಾರ್ವಜನಿಕ ಸಂಸ್ಥೆಗಳ ಸಹಕಾರದೊಂದಿಗೆ ವಿಪತ್ತು ನಿರ್ವಹಣಾ ಜಾಗೃತಿಗಳ ಬಗ್ಗೆ ತರಬೇತಿ ನೀಡುವುದು.
11) ಜಿಲ್ಲಾಡಳಿತಕ್ಕೆ ಪ್ರಕೃತಿ ವಿಕೋಪ ನಿರ್ವಹಣಾ ಯೋಜನೆಗಳ ಬಗ್ಗೆ ಮಾಹಿತಿ ಹಾಗೂ ಕ್ರಿಯಾ ಯೋಜನೆ ಸಿದ್ದಪಡಿಸುವಲ್ಲಿ ನೆರವು ನೀಡುವುದು.
12) ಜಿಲ್ಲಾಧಿಕಾರಿಗಳು ವಹಿಸುವ ಇತರೆ ಸಂಬಂಧಿಸಿದ ಕಾರ್ಯಗಳನ್ನು ನಿರ್ವಹಿಸುವುದು.

**ಅರ್ಹತೆಗಳು:-**

1) ವಿಪತ್ತು ವೃತ್ತಿಪರ ಉದ್ಯೋಗಿಯು ಕಡ್ಡಾಯವಾಗಿ ವಿಜ್ಞಾನ/ಸಮಾಜ ವಿಜ್ಞಾನ /ಗ್ರಾಮೀಣಾಭಿವೃದ್ಧಿ/ಪರಿಸರ ವಿಜ್ಞಾನ ನಿರ್ವಹಣೆ ವಿಷಯದಲ್ಲಿ ಯುಜಿಸಿ ಯಿಂದ ಮಾನ್ಯತೆ ಪಡೆದ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿರತಕ್ಕದ್ದು.
2) ವಿಪತ್ತು ನಿರ್ವಹಣಾ ವಿಷಯದಲ್ಲಿ ಕನಿಷ್ಟ 3 ರಿಂದ 5 ವರ್ಷಗಳ ಸೇವಾನುಭವವಿರತ್ಕದ್ದು.
3) ಅಭ್ಯರ್ಥಿಯು ಜಿಲ್ಲಾ ವಿಪತ್ತು ನಿರ್ವಹಣಾ ಯೋಜನೆ ಹಾಗೂ ಭಾರತೀಯ ವಿಪತ್ತು ನಿರ್ವಹಣಾ ಜಾಲಗಳ ಬಗ್ಗೆ ಆಳವಾಗಿ ತಿಳುವಳಿಕೆ ಉಳ್ಳವರಾಗಿರತಕ್ಕದ್ದು.
4) ಅಭ್ಯರ್ಥಿಯು ವಿಪತ್ತು ನಿರ್ವಹಣಾ ಕಾಯ್ದೆ-2005 ಹಾಗೂ ರಾಷ್ಟ್ರೀಯ ವಿಪತ್ತು ನಿರ್ವಹಣಾ ಮಾರ್ಗಸೂಚಿಯ ವಿವಿಧ ವಿಪತ್ತುಗಳ ಬಗ್ಗೆ ತಿಳಿದಿರಬೇಕು.
5) ಅಭ್ಯರ್ಥಿಯು ಉನ್ನತ ಸಂವಹನ ಕೌಶಲ್ಯದೊಂದಿಗೆ ಪ್ರದರ್ಶನ ಕೌಶಲ್ಯವನ್ನು ಹೊಂದಿದ್ದು, ಕನ್ನಡ ಮತ್ತು ಆಂಗ್ಲ ಭಾಷೆಯ ಮೇಲೆ ಸಂಪೂರ್ಣ ಹಿಡಿತವಿರಬೇಕು.
6) ಅಭ್ಯರ್ಥಿಯು ಗಣಕಯಂತ್ರ ಬಳಕೆ, ಎಂಎಸ್ ಆಫೀಸ್, ಹಾಗೂ ಇಂಟರ್‌ನೆಟ್ ಬಳಕೆಯ ಬಗ್ಗೆ ದೀರ್ಘ ಜ್ಞಾನವನ್ನು ಹೊಂದಿರಬೇಕು.

**ಗೌರವ ಧನ:-**

ಆಯ್ಕೆಯಾಗುವ ಅಭ್ಯರ್ಥಿಗೆ ಸರ್ಕಾರಿ ತೆರಿಗೆ ಸೇರಿದಂತೆ ಮಾಸಿಕ ರೂ.40,000/-ಗಳು ಮತ್ತು ಅನ್ಯ ಸ್ಥಳಗಳಿಗೆ ತೆರಳಿದಂತಹ ಸಂದರ್ಭದಲ್ಲಿ ಸರ್ಕಾರದ ಮಾರ್ಗಸೂಚಿ ದರಗಳಲ್ಲಿ ಭತ್ಯೆಗಳನ್ನು ಪಾವತಿಸಲಾಗುವುದು.

**ನೇಮಕಾತಿ ನಿಬಂಧನೆಗಳು:-**

1) ಈ ನೇಮಕಾತಿಯು ಸಂಪೂರ್ಣವಾಗಿ ತಾತ್ಕಾಲಿಕವಾಗಿದ್ದು, ನೇಮಕಾತಿ ಆದೇಶದ ದಿನಾಂಕದಿಂದ ಒಂದು ವರ್ಷದ ಗುತ್ತಿಗೆ ಅವಧಿವರೆಗೆ ಮಾತ್ರ ಚಾಲ್ತಿಯಲ್ಲಿರುತ್ತದೆ.
2) ಆಯ್ಕೆಯಾದ ಅಭ್ಯರ್ಥಿಯು ಜಿಲ್ಲಾಧಿಕಾರಿಗಳಿಗೆ ವರದಿ ಸಲ್ಲಿಸುವುದು ಹಾಗೂ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸದಸ್ಯರುಗಳೊಂದಿಗೆ ಹೊಂದಾಣಿಕೆಯಿಂದಿರಬೇಕು.
3) ಅಭ್ಯರ್ಥಿಯ ಕಾರ್ಯಸ್ಥಾನ ಜಿಲ್ಲಾಧಿಕಾರಿಗಳ ಕಚೇರಿಯಾಗಿರುತ್ತದೆ.
4) ಆಯ್ಕೆಯಾದ ಅಭ್ಯರ್ಥಿಯು ಹಾಜರ್ಪಡಿಸಿದ ದಾಖಲೆಗಳು/ಅರ್ಜಿಗಳಲ್ಲಿ ತಪ್ಪು ಮಾಹಿತಿ, ಸುಳ್ಳಿನಿಂದ ಕೂಡಿದ ಮಾಹಿತಿ ಇರುವುದು ಕಂಡುಬಂದಲ್ಲಿ ಅಂತಹವರನ್ನು ಯಾವುದೇ ಕಾರಣ ನೀಡದೇ ಸೇವೆಯಿಂದ ತೆಗೆದುಹಾಕಲಾಗುವುದು.

5) ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ), ಕರ್ನಾಟಕ ಸರ್ಕಾರ ಅಥವಾ ಜಿಲ್ಲಾಧಿಕಾರಿಗಳು ನೇಮಕಾತಿಯ ಯಾವುದೇ ನಿಯಮಾವಳಿಗಳನ್ನು ಕೈಬಿಡಬಹುದು ಅಥವಾ ಎತ್ತಿ ಹಿಡಿಯಬಹುದಾಗಿದೆ.

**ಇಚ್ಛೆಯುಳ್ಳ ವ್ಯಕ್ತಿಗಳು:-**

1) ಇಚ್ಛೆಯುಳ್ಳ ಅರ್ಹ ವ್ಯಕ್ತಿಗಳು ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ ಇವರಿಗೆ ನೋಂದಾಯಿತ ಅಂಚೆಯ ಮೂಲಕ ಅರ್ಜಿಯನ್ನು ಸಲ್ಲಿಸಬೇಕಾಗಿರುತ್ತದೆ.
2) ಸ್ವಯಂಘೋಷಿತ ವಿದ್ಯಾರ್ಹತೆಯ ಮತ್ತು ಅನುಭವ ಪ್ರಮಾಣ ಪತ್ರಗಳನ್ನು ಹಾಗೂ ಇತ್ತೀಚಿನ ಚಾರಿತ್ರ್ಯ ನಿರೂಪಣೆ ಪತ್ರದೊಂದಿಗೆ ಅರ್ಜಿಯನ್ನು ಸಲ್ಲಿಸಬೇಕು. ಹಾಗೂ ಅಸಲು ದಾಖಲೆಗಳನ್ನು ದಾಖಲೆಗಳ ಪರಿಶೀಲನೆ ಸಂದರ್ಭದಲ್ಲಿ ಹಾಗೂ ಸಂದರ್ಶನದ ವೇಳೆಯಲ್ಲಿ ಹಾಜರುಪಡಿಸಬೇಕು.
3) ದಿನಾಂಕ:10-01-2019ರ ನಂತರ ಬಂದಂತಹ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.
4) ಹೆಚ್ಚಿನ ಮಾಹಿತಿಗಾಗಿ ಕಚೇರಿ ಸಮಯದಲ್ಲಿ ದೂರವಾಣಿ ಸಂಖ್ಯೆ 08194-222538, 222811 ಮೂಲಕ ಪಡೆಯಬಹುದಾಗಿರುತ್ತದೆ.

**ಸೂಚನೆಗಳು:-** ಅರ್ಜಿದಾರರು ಯಾವುದೇ ರೀತಿಯ ಪ್ರಭಾವ/ಅರ್ಜಿಯ ಅವಧಿಯಲ್ಲಿ ಅರ್ಹತೆ ಹೊಂದದೇ ಇರುವ/ತಪ್ಪು ಮಾಹಿತಿ ನೀಡುವವರ ವಿರುದ್ಧ ಕಾನೂನು ರೀತ್ಯಾ ಕ್ರಮ ಜರುಗಿಸಲಾಗುವುದು.

ದಿನಾಂಕ:17-12-2018
ಸ್ಥಳ:- ಚಿತ್ರದುರ್ಗ

(ಆರ್.ವಿನೋತ್ ಪ್ರಿಯಾ)
ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು,
ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ
ಚಿತ್ರದುರ್ಗ ಜಿಲ್ಲೆ

## ಗುತ್ತಿಗೆ ಆಧಾರದ ಮೇರೆಗೆ ಚಿತ್ರದುರ್ಗ ಜಿಲ್ಲೆಯ ವಿಪತ್ತು ವೃತ್ತಿಪರ ಹುದ್ದೆಗಾಗಿ ಅರ್ಜಿ ನಮೂನೆ:-

| | | |
|---|---|---|
| 1 | ಅಭ್ಯರ್ಥಿಯ ಹೆಸರು (ದಪ್ಪ ಅಕ್ಷರಗಳಲ್ಲಿ) | |
| 2 | ತಂದೆ/ಗಂಡನ ಹೆಸರು | |
| 3 | ಲಿಂಗ | |
| 4 | ಹುಟ್ಟಿದ ದಿನಾಂಕ (ಎಸ್‌ಎಸ್‌ಎಲ್‌ಸಿ ಅಂಕಪಟ್ಟಿಯಲ್ಲಿರುವಂತೆ) | |
| 5 | ಖಾಯಂ ವಿಳಾಸ ಮತ್ತು ಮೊಬೈಲ್ ನಂಬರ್ | |
| 6 | ಕೆಳಗಿನ ಪರೀಕ್ಷೆಗಳಲ್ಲಿ ಪಡೆಯಲಾಗಿರುವ ಅಂಕಗಳು | |
| | 1) ಎಸ್ ಎಸ್ ಎಲ್ ಸಿ | ಗರಿಷ್ಠ ಅಂಕಗಳು / ಪಡೆದ ಅಂಕಗಳು / ಪ್ರತಿಶತ (%) |
| | 2) ಪಿ.ಯು.ಸಿ/ತತ್ಸಮಾನ | ಗರಿಷ್ಠ ಅಂಕಗಳು / ಪಡೆದ ಅಂಕಗಳು / ಪ್ರತಿಶತ (%) |
| | 3) ಪದವಿ | ಗರಿಷ್ಠ ಅಂಕಗಳು / ಪಡೆದ ಅಂಕಗಳು / ಪ್ರತಿಶತ (%) |
| | 4) ಸ್ನಾತಕೋತ್ತರ ಪದವಿ | ಗರಿಷ್ಠ ಅಂಕಗಳು / ಪಡೆದ ಅಂಕಗಳು / ಪ್ರತಿಶತ (%) |
| | 5) ಕೆಲಸದ ಅನುಭವದ ವಿವರ | |
| 7 | ಗಣಿಕಯಂತ್ರ ಹಾಗೂ ಇಂಟರ್‌ನೆಟ್ ಬಳಕೆ ಕುರಿತಾಗಿ ಹೊಂದಿರುವ ದಾಖಲೆಗಳು | |
| 8 | ಡಿಡಿಎಂಪಿ ಮತ್ತು ಐಡಿಆರ್‌ಎನ್ ಕುರಿತಾದ ಮಾಹಿತಿ | |
| 9 | ಚಾರಿತ್ರ್ಯ ನಿರೂಪಣಾ ದಾಖಲೆಗಳು | |

ಸ್ವಯಂ ದೃಢೀಕೃತ ಶೈಕ್ಷಣಿಕ ಹಾಗೂ ಅನುಭವದ ದೃಢೀಕರಣ ಮತ್ತು ಚಾರಿತ್ರ್ಯ ನಿರೂಪಣಾ ದಾಖಲೆಗಳನ್ನು ಇದರೊಂದಿಗೆ ಅನುಬಂಧಿಸಿದೆ.

ದಿನಾಂಕ: ಹೆಸರು:-

ಸ್ಥಳ: ಸಹಿ: